 ISSN : 2583-2948

# " ಕರ್ನಾಟಕದ ಪ್ರಮುಖ ಪ್ರಥಮಗಳು"

ಡಾ. ಶೇಖರ್.ಆರ್
ಸಹ ಪ್ರಾಧ್ಯಾಪಕರು,
ಗಣಕ ವಿಜ್ಞಾನ ಹಾಗೂ ಇಂಜಿನಿಯರಿಂಗ್ ವಿಭಾಗ,
ಅಲಯನ್ಸ್ ವಿಶ್ವವಿದ್ಯಾಲಯ, ಆನೇಕಲ್ ಬೆಂಗಳೂರು

ದ್ರಾವಿಡ ಭಾಷೆಗಳಲ್ಲಿ ಪ್ರಾಮುಖ್ಯವುಳ್ಳ ಭಾಷೆಯೂ ಭಾರತದ ಪುರಾತನವಾದ ಭಾಷೆಗಳಲ್ಲಿ ಒಂದೂ ಆಗಿರುವ ಕನ್ನಡ ಭಾಷೆಯನ್ನು ಅದರ ವಿವಿಧ ರೂಪಗಳಲ್ಲಿ ಸುಮಾರು ೪೫ ದಶಲಕ್ಷ (೪.೫ ಕೋಟಿ) ಜನರು ಆಡು ನುಡಿಯಾಗಿ ಬಳಸುತ್ತಲಿದ್ದಾರೆ. ಕನ್ನಡ ಕರ್ನಾಟಕ ರಾಜ್ಯದ ಆಡಳಿತ ಭಾಷೆ. ಜಗತ್ತಿನಲ್ಲಿ ಅತ್ಯಂತ ಹೆಚ್ಚು ಮಂದಿ ಮಾತನಾಡುವ ಭಾಷೆಯೆಂಬ ನೆಲೆಯಲ್ಲಿ ಇಪ್ಪತೊಂಬತ್ತನೆಯ ಸ್ಥಾನ ಕನ್ನಡಕ್ಕಿದೆ. ೨೦೧೧ರ ಜನಗಣತಿಯ ಪ್ರಕಾರ ಜಗತ್ತಿನಲ್ಲಿ ೬.೪ ಕೋಟಿ ಜನರು ಕನ್ನಡ ಮಾತನಾಡುತ್ತಾರೆ ಎಂದು ತಿಳಿದುಬಂದಿದೆ. ಇವರಲ್ಲಿ ೫.೫ ಕೋಟಿ ಜನರ ಮಾತೃಭಾಷೆ ಕನ್ನಡವಾಗಿದೆ. ಬ್ರಾಹ್ಮಿ ಲಿಪಿಯಿಂದ ರೂಪುಗೊಂಡ ಕನ್ನಡ ಲಿಪಿಯನ್ನು ಉಪಯೋಗಿಸಿ ಕನ್ನಡ ಭಾಷೆಯನ್ನು ಬರೆಯಲಾಗುತ್ತದೆ. ಕನ್ನಡ ಬರಹದ ಮಾದರಿಗಳಿಗೆ ಸಾವಿರದ ಐನೂರು ವರುಷಗಳ ಚರಿತ್ರೆಯಿದೆ. ಕ್ರಿ.ಶ. ಆರನೆಯ ಶತಮಾನದ ಪಶ್ಚಿಮ ಗಂಗ ಸಾಮ್ರಾಜ್ಯದ ಕಾಲದಲ್ಲಿ ಮತ್ತು ಒಂಬತ್ತನೆಯ ಶತಮಾನದ ರಾಷ್ಟ್ರಕೂಟ ಸಾಮ್ರಾಜ್ಯದ ಕಾಲದಲ್ಲಿ ಹಳಗನ್ನಡ ಸಾಹಿತ್ಯ ಅತ್ಯಂತ ಹೆಚ್ಚಿನ ರಾಜಾಶ್ರಯ ಪಡೆಯಿತು. ಅದಲ್ಲದೆ ಸಾವಿರ ವರುಷಗಳ ಸಾಹಿತ್ಯ ಪರಂಪರೆ ಕನ್ನಡಕ್ಕಿದೆ. ವಿನೋಬಾ ಭಾವೆ ಕನ್ನಡ ಲಿಪಿಯನ್ನು ಲಿಪಿಗಳ ರಾಣಿಯೆಂದು ಹೊಗಳಿದ್ದಾರೆ. ಕನ್ನಡ ಭಾಷೆಗೆ ಶಾಸ್ತ್ರೀಯ ಸ್ಥಾನಮಾನ ಸಿಕ್ಕಿರುವುದು ಸಹ ಬಹು ಹೆಮ್ಮೆಯ ವಿಷಯ.

"ಪದನಱಿದು ನುಡಿಯಲುಂ ನುಡಿ

ದುದನಱಿದಾರಯಲುಮಾರ್ಪರಾ ನಾಡವರ್ಗಳ್

ಚದುರರ್ ನಿಜದಿಂ ಕುಱಿತೋ

ದದೆಯುಂ ಕಾವ್ಯಪ್ರಯೋಗಪರಿಣತಮತಿಗಳ್"

ಶ್ರೀವಿಜಯನ ಕವಿರಾಜ ಮಾರ್ಗದಿಂದ ಆಯ್ದ ಈ ಸಾಲುಗಳು ಕನ್ನಡಿಗರ ಹೆಮ್ಮೆಯನ್ನು ಎತ್ತಿ ಹಿಡಿಯುವಲ್ಲಿ ಬಹುಮುಖ್ಯ ಪಾತ್ರವನ್ನು ವಹಿಸುತ್ತವೆ. ವಿದ್ವಾಂಸರು, ಪಂಡಿತರು ಮೊದಲಾದವರು ಕನ್ನಡ ಜನರನ್ನು ಅನಕ್ಷರಸ್ಥರೆಂದು ಕಡೆಗಣಿಸುವಾಗ ಕನ್ನಡಿಗರ ಛಲ ಎಂತಹುದೆಂದರೆ ಓದಿಗಾಗಿಯೇ ಸಮಯವನ್ನು ಮೀಸಲಿಡದೆ ತಮ್ಮ ತಮ್ಮ ಕೆಲಸಕಾರ್ಯಗಳಲ್ಲಿ ಮಗ್ನರಾಗಿದ್ದರೂ ಸಹ ಜಾನಪದದ ಮೂಲಕ ಬಾಯಿಂದ ಬಾಯಿಗೆ ಹಾಡಿನ ರೂಪದಲ್ಲಿ ನುಡಿಗಳನ್ನೇ ಹರಡುತ್ತ ನೆನಪಿನಲ್ಲಿಟ್ಟುಕೊಂಡು ಸಾಗುವರು . ಯಾವ ಕವಿಗೂ ಕಡಿಮೆ ಏನಿಲ್ಲ ನಮ್ಮವರ ಬುದ್ಧಿಮತ್ತೆ ಎಂದು ವರ್ಣಿಸಿದ್ದಾನೆ.

ಕನ್ನಡದ ಮೊದಲ ಶಾಸನ – ಹಲ್ಮಿಡಿ ಶಾಸನ (ಕ್ರಿ. ಶ.450)

ಕನ್ನಡ ನಾಡಗೀತೆ – ಜೈ ಭಾರತ ಜನನಿಯ ತನುಜಾತೆ

ತ್ರಿಪದಿ ಛಂದಸ್ಸಿನಲ್ಲಿರುವ ಮೊದಲ ಶಾಸನ – ಕಪ್ಪೆ ಅರೆಭಟ್ಟನ ಶಾಸನ (ಕ್ರಿ. ಶ .700)

ಕನ್ನಡದ ಮೊದಲ ಶಾಸ್ತ್ರ ಗ್ರಂಥ – ಕವಿರಾಜ ಮಾರ್ಗ (ಕ್ರಿ.ಶ. 850)

ಕನ್ನಡದ ಮೊದಲ ಗದ್ಯ ಕೃತಿ – ವಡ್ಡಾರಾಧನೆ (ಕ್ರಿ ಶ.920)

ಕನ್ನಡದ ಆದಿ ಕವಿ – ನಾಡೋಜ ಪಂಪ (ಕ್ರಿ. ಶ.940)

ಕನ್ನಡದ ಮೊದಲ ಕಾವ್ಯ – ಆದಿಪುರಾಣ (ಪಂಪ .ಕ್ರಿ.ಶ.941)

ಕನ್ನಡದ ಮೊದಲ ಕವಯತ್ರಿ ಮತ್ತು ವಚನಕಾರ್ತಿ – ಅಕ್ಕಮಹಾದೇವಿ (ಕ್ರಿ.ಶ.1150)

ಕನ್ನಡದಲ್ಲಿ ಮೊದಲು ಅಚ್ಚಾದ ಕೃತಿ – 'ಎ ಗ್ರಾಮರ್ ಆಫ್ ದಿ ಕರ್ನಾಟಕ ಲಾಂಗ್ವೇಜ್ '

(ವಿಲಿಯಂ ಕೇರಿ ಕ್ರಿ.ಶ 1890)

ಕನ್ನಡದ ಮೊದಲ ದೊರೆ – ಕದಂಬ ವಂಶದ ಮಯೂರವರ್ಮ.

ಕನ್ನಡದ ಮೊದಲ ಶಿಲ್ಪ – ಬನವಾಸಿಯ ನಾಗಶಿಲ್ಪ

ಕನ್ನಡದ ಮೊದಲ ಕೆರೆ – ಚಂದ್ರವಳ್ಳಿ ( ಚಿತ್ರದುರ್ಗ )

ಕನ್ನಡದ ಮೊದಲ ಶಾಸನ – ಹಲ್ಮಿಡಿ ಶಾಸನ ( ಕ್ರಿ.ಶ. 450)

ಕನ್ನಡದ ಮೊದಲ ಕೋಟೆ – ಬಾದಾಮಿ (ಕ್ರಿ. ಶ. 543)

ಕನ್ನಡದ ಮೊದಲ ನಾಟಕ – ಸಿಂಗರಾರ್ಯನ ಮಿತ್ರವಿಂದಾಗೋವಿಂದ

ಕನ್ನಡದ ಮೊದಲ ದಿನ ಪತ್ರಿಕೆ – ಸೂರ್ಯೋದಯ ಪ್ರಕಾಶಿಕ

ಕನ್ನಡದ ಮೊದಲ ವಚನಕಾರ್ತಿ – ಅಕ್ಕಮಹಾದೇವಿ

ಕನ್ನಡದ ಮೊದಲ ರಾಷ್ಟ್ರಕವಿ – ಗೋವಿಂದ ಪೈ

ಕನ್ನಡದ ಮೊದಲ ಪತ್ರಿಕೆ – ಮಂಗಳೂರು ಸಮಾಚಾರ ಸ್ಥಾಪಕ -ಫಾದರ್ ಹರ್ಮನ್ ನೊಗ್ಲಿಂಗ್ -1842

ಕನ್ನಡದ ಮೊದಲ ಪಂಪ ಪ್ರಶಸ್ತಿ ವಿಜೇತ ಕವಿ – ಕುವೆಂಪು

ಭಾರತ ರತ್ನ ಪ್ರಶಸ್ತಿ ಪಡೆದ ಮೊದಲ ಕನ್ನಡಿಗ – ಸರ್. ಎಂ. ವಿಶ್ವೇಶ್ವರಯ್ಯ.

ಜ್ಞಾನ ಪೀಠ ಪ್ರಶಸ್ತಿ ಪಡೆದ ಮೊದಲ ಕನ್ನಡ ಕೃತಿ ಮತ್ತು ಕವಿ – ಶ್ರೀ ರಾಮಾಯಣ ದರ್ಶನಂ

(ಕುವೆಂಪು)

ರಾಷ್ಟ್ರ ಪ್ರಶಸ್ತಿ ಪಡೆದ ಮೊದಲ ಕನ್ನಡ ಚಿತ್ರ – ಬೇಡರ ಕಣ್ಣಪ್ಪ

ರಾಷ್ಟ್ರ ಪ್ರಶಸ್ತಿ ಪಡೆದ ಮೊದಲ ಕನ್ನಡದ ಗಾಯಕ – ಶಿವಮೊಗ್ಗ ಸುಬ್ಬಣ್ಣ

ಕನ್ನಡ ಸಾಹಿತ್ಯ ಸಮ್ಮೇಳನದ ಮೊದಲ ಮಹಿಳಾ ಅಧ್ಯಕ್ಷೆ – ಜಯದೇವಿತಾಯಿ ಲಿಗಾಡೆ (1984 )

ಕನ್ನಡದ ಮೊದಲ ವರ್ಣಚಿತ್ರ – ಅಮರಶಿಲ್ಪಿ ಜಕಣಾಚಾರಿ

ಕನ್ನಡ ಕೆಲಸಕ್ಕೆ ಡಾಕ್ಟರೇಟ್ ಪ್ರಶಸ್ತಿ ಪಡೆದ ಮೊದಲಿಗ – ಫರ್ಡಿನೆಂಡ್ ಕಿಟ್ಟೆಲ್ (ಕನ್ನಡ -ಇಂಗ್ಲೀಷ್

ನಿಘಂಟು)

ಕನ್ನಡ ರಂಗಭೂಮಿಯ ಮೊದಲ ನಾಯಕಿ ನಟಿ – ಎಲ್ಲೂಬಾಯಿ ಗುಳೇದಗುಡ್ಡ.

ಕರ್ನಾಟಕದಲ್ಲಿ ತಯಾರಾದ ಮೊದಲ ಮೂಕ ಚಿತ್ರ – ಮೃಚ್ಛಕಟಿಕ

ಹೆಚ್ಚು ರಾಷ್ಟ್ರೀಯ ಪ್ರಶಸ್ತಿ ಪಡೆದ ಕನ್ನಡ ಪತ್ರಿಕೆ – ಉದಯವಾಣಿ

ರಾಷ್ಟ್ರ ಪ್ರಶಸ್ತಿ ಪಡೆದ ಮೊದಲ ಯಕ್ಷಗಾನ ಕಲಾವಿದ – ರಾಮಗಾಣಿಗ.

ಸೋವಿಯತ್ ಲ್ಯಾಂಡ್ ಪ್ರಶಸ್ತಿ ಪಡೆದ ಮೊದಲ ಕನ್ನಡ ಮಹಿಳೆ ಮತ್ತು ಕನ್ನಡಿಗ – ಅನುಪಮಾ ನಿರಂಜನ, ಬಸವರಾಜ ಕಟ್ಟೀಮನಿ.

ಕನ್ನಡದ ಮೊದಲ ನವೋದಯ ಕವಯತ್ರಿ – ಬೆಳಗೆರೆ ಜಾನಕಮ್ಮ.

ಕನ್ನಡದ ಪ್ರಥಮ ತ್ರಿಪದಿ ಶಾಸನ – ಬಾದಾಮಿ ಶಾಸನ

ಕನ್ನಡದ ಪ್ರಥಮ ರಾಜವಂಶ – ಕದಂಬ ವಂಶ

ಸ್ವಾತಂತ್ರ್ಯ ಕಹಳೆ ಊದಿದ ಪ್ರಥಮ ಕನ್ನಡ ಪ್ರಾಂತ್ಯ – ಕಿತ್ತೂರು

ಕರ್ನಾಟಕ ಮೊದಲ ವಿಶ್ವವಿದ್ಯಾಲಯ – ಮೈಸೂರು

ಅಖಂಡ ಭಾರತವನ್ನಾಳಿದ ಮೊದಲ ಕನ್ನಡ ದೊರೆ – ಇಮ್ಮಡಿ ಪುಲಿಕೇಶಿ

ರಾಷ್ಟ್ರೀಯ ಪ್ರಾಧ್ಯಾಪಕರಾಗಿ ಆಯ್ಕೆಯಾದ ಮೊದಲ ಕನ್ನಡಿಗ – ಎಸ್.ಎಲ್. ಭೈರಪ್ಪ

ಕರ್ನಾಟಕದ ಮೊದಲ ಮೆಡಿಕಲ್ ಕಾಲೇಜ್ - ಮೈಸೂರು ಮೆಡಿಕಲ್ ಕಾಲೇಜ್

ಭಾರತರತ್ನ ಪ್ರಶಸ್ತಿ ಪಡೆದ ಪ್ರಥಮ ಕನ್ನಡ ವಿಜ್ಞಾನಿ – ಸರ್.ಸಿ.ವಿ.ರಾಮನ್.

ರೈಟ್ ಸಹೋದರರಿಗಿಂತ 8 ವರ್ಷ ಮೊದಲೇ (1895) ಮುಂಬಯಿಯಲ್ಲಿ 2000 ಅಡಿ ಎತ್ತರಕ್ಕೆವಿಮಾನ ಹಾರಿಸಿದ ಕನ್ನಡಿಗ – ಆನೇಕಲ್ ಸುಬ್ಬರಾಯ ಶಾಸ್ತ್ರಿ.

ಕನ್ನಡದ ಪ್ರಥಮ ನಾಡಗೀತೆ– ಉದಯವಾಗಲಿ ನಮ್ಮ ಚೆಲುವ ಕನ್ನಡನಾಡು ಕವಿ : ಹುಯಿಲಗೋಳ ನಾರಾಯಣರಾಯರು ಹುಯಿಲಗೋಳ

ಕನ್ನಡದ ಪ್ರಥಮ ಭಾವಗೀತಗಳ ಕ್ಯಾಸೆಟ್ – ನಿತ್ಯೋತ್ಸವ

ವಿದೇಶದಲ್ಲಿ ಚಿತ್ರಿಸಿದ ಮೊದಲ ಕನ್ನಡ ಚಿತ್ರ – ಸಿಂಗಾಪುರದಲ್ಲಿ ರಾಜಾಕುಳ್ಳ

ಕನ್ನಡದ ಪ್ರಥಮ ಚಿತ್ರ ನಿರ್ಮಾಪಕರು – ಎಂ. ವಿ ರಾಜಮ್ಮ.

ಕನ್ನಡ ಚಿತ್ರರಂಗದ ಪ್ರಥಮ ವಾಕ್ಚಿತ್ರ – ಭಕ್ತಧ್ರುವ

ಕನ್ನಡ ರಂಗಮಂಟಪದ ಮೇಲೆ ಪ್ರಥಮ ಬಾರಿಗೆ ಜೀವಂತ ಪ್ರಾಣಿ ತಂದ ಕನ್ನಡಿಗ – ಗುಬ್ಬಿವೀರಣ್ಣ

ಕರ್ನಾಟಕ ಪ್ರಶಸ್ತಿ , ದಾದಾ ಸಾಹೇಬ ಫಾಲ್ಕೆ ಪ್ರಶಸ್ತಿ ಪಡೆದ ಪ್ರಥಮ ಕನ್ನಡ ಚಲನಚಿತ್ರ ನಟ – ಡಾ.

ರಾಜ್ ಕುಮಾರ್

ಕರ್ನಾಟಕದ ಪ್ರಥಮ ಚಿತ್ರಮಂದಿರ – ಪ್ಯಾರಾಮೊಂಟು.

ಭಾರತ ಹಾಕಿ ತಂಡದ ಮೊದಲ ನಾಯಕರಾಗಿದ್ದ ಕನ್ನಡಿಗ – ಎಂ. ಪಿ ಗಣೇಶ್.

ಭಾರತೀಯ ಮಹಿಳಾ ಕ್ರಿಕೆಟ್ ತಂಡದ ಪ್ರಥಮ ಕನ್ನಡತಿ – ಶಾಂತ ರಂಗಸ್ವಾಮಿ.

ಭಾರತ ಶ್ರೀ, ಭಾರತ ಕಿಶೋರ್, ಭಾರತ್ ಕುಮಾರ್ ಪ್ರಶಸ್ತಿಗಳನ್ನು ಒಂದೇ ವರ್ಷದಲ್ಲಿ ಗಳಿಸಿದ ಕನ್ನಡಿಗ ದೇಹದಾರ್ಢ್ಯ ಪಟು – ರೇಮಂಡ್ ಡಿಸೋಜಾ

ನಾಟಕ ರಂಗಕ್ಕೆ ಸಲ್ಲಿಸಿದ ಸೇವೆಗಾಗಿ ಫಿಲಿಪ್ಪೈನ್ಸ್ ಮ್ಯಾಗ್ಸೆಸ್ಸೇ ಪ್ರಶಸ್ತಿ ಪಡೆದ ಮೊದಲ ಕನ್ನಡಿಗ – ಕೆ.ವಿ

ಸುಬ್ಬಣ್ಣ

ಅಭಿನಯಿಸಿದ ಮೊದಲ ಚಿತ್ರಕ್ಕೆ ಅಂತರ್ ರಾಷ್ಟ್ರೀಯ ಪ್ರಶಸ್ತಿ ಪಡೆದ ಕನ್ನಡದ ನಾಯಕ – ದಿ.

ಶಂಕರನಾಗ್

ಕನ್ನಡದ ಮೊದಲ ವರ್ಣಚಲನಚಿತ್ರ – ಸತಿಸುಲೋಚನಾ.

ಕನ್ನಡ ಭಾಷೆಯ ಮೊದಲ ಪದ – ಇಸಿಲ.

ಉತ್ತರ ಭಾರತಕ್ಕೆ ದಂಡಯಾತ್ರೆ ಕೈಗೊಂಡ ಮೊದಲ ಅರಸ – 1 ನೇ ಧ್ರುವ

ಕನ್ನಡದ ಮೊದಲ ಕಾದಂಬರಿ – ಇಂದಿರಾಬಾಯಿ

ಕನ್ನಡದ ಮೊದಲ ಕಥನ ಕವನ – ಗೋವಿನ ಹಾಡು

ಕನ್ನಡದ ಮೊದಲ ಹಾಸ್ಯ ಪತ್ರಿಕೆ – ವಿಕಟ ಪ್ರತಾಪ

ಕನ್ನಡದ ಮೊದಲ ವೈದ್ಯ ಗ್ರಂಥ – ಗೋವೈದ್ಯ

ಕನ್ನಡದ ಮೊದಲ ಗೀತ ನಾಟಕ – ಕಾರಂತರ ಮುಕ್ತ ದ್ವಾರ

ಕನ್ನಡದ ಮೊದಲ ಬೀದಿ ನಾಟಕ – ಕಟ್ಟು ಕಟ್ಟು

ಕನ್ನಡದ ಮೊದಲ ವರ್ಣರಂಜಿತ ಚಲನಚಿತ್ರ – ಅಮರಶಿಲ್ಪಿ ಜಕಣಾಚಾರಿ

**ಕರ್ನಾಟಕದ ಮೊದಲಿಗರು :**

ಸೇನಾ ದಂಡನಾಯಕರಾದ ಮೊದಲ ಕನ್ನಡಿಗ – ಕೆ.ಎಂ.ಕಾರಿಯಪ್ಪ

ಕರ್ನಾಟಕದ ಮೊದಲ ಪತ್ರಕರ್ತೆ – ಚಿ.ನ ಮಂಗಳ

ಪ್ರಧಾನಮಂತ್ರಿಯಾದ ಮೊದಲ ಕನ್ನಡಿಗ – ಹೆಚ್.ಡಿ.ದೇವೇಗೌಡ

ಕರ್ನಾಟಕದ ಮೊದಲ ರಾಜ್ಯಪಾಲ – ಜಯಚಾಮರಾಜೇಂದ್ರ ಒಡೆಯರ್

ಕರ್ನಾಟಕದ ಮೊದಲ ಮುಖ್ಯಮಂತ್ರಿ – ಕೆ.ಸಿ.ರೆಡ್ಡಿ

ಏಕೀಕೃತ ಕರ್ನಾಟಕದ ಮೊದಲ ಮುಖ್ಯಮಂತ್ರಿ – ಎಸ್.ನಿಜಲಿಂಗಪ್ಪ

ಭಾರತರತ್ನ ಪ್ರಶಸ್ತಿ ವಿಜೇತ ಮೊದಲ ಕನ್ನಡಿಗ – ಸರ್ ಎಂ.ವಿಶ್ವೇಶ್ವರಯ್ಯ

ಮ್ಯಾಗ್ಸೆಸೇ ಪ್ರಶಸ್ತಿ ವಿಜೇತ ಮೊದಲ ಕನ್ನಡಿಗ – ಕೆ.ವಿ.ಸುಬ್ಬಣ್ಣ

ಜ್ಞಾನಪೀಠ ಪ್ರಶಸ್ತಿ ವಿಜೇತ ಮೊದಲ ಕನ್ನಡಿಗ – ಕುವೆಂಪು

ಪಂಪ ಪ್ರಶಸ್ತಿ ವಿಜೇತ ಮೊದಲ ಕನ್ನಡಿಗ – ಕುವೆಂಪು

ಕರ್ನಾಟಕದ ಮೊದಲ ರಾಷ್ಟ್ರಕವಿ – ಗೋವಿಂದ ಪೈ

ಕಾಳಿದಾಸ್ ಸಮ್ಮಾನ್ ವಿಜೇತ ಮೊದಲ ಕನ್ನಡಿಗ – ಮಲ್ಲಿಕಾರ್ಜುನ ಮನ್ಸೂರ್.

ಕಬೀರ್ ಸಮ್ಮಾನ್ ವಿಜೇತ ಮೊದಲ ಕನ್ನಡಿಗ – ಗೋಪಾಲಕೃಷ್ಣ ಅಡಿಗ

ಜಮನ್ ಲಾಲ್ ಪ್ರಶಸ್ತಿ ವಿಜೇತ ಮೊದಲ ಕನ್ನಡಿಗ – ತಗಡೂರು ರಾಮಚಂದ್ರರಾವ್

ಗೋಯೆಂಕಾ ಪ್ರಶಸ್ತಿ ವಿಜೇತ ಮೊದಲ ಕನ್ನಡಿಗ – ಪಾ.ವೆಂ.ಆಚಾರ್ಯ

ರಾಷ್ಟ್ರ ಪ್ರಶಸ್ತಿ ಪಡೆದ ಮೊದಲ ಯಕ್ಷಗಾನ ಕಲಾವಿದ – ಹಾರಾಡಿ ರಾಮಗಾಣಿಗ

ಕನ್ನಡ ಕೆಲಸಕ್ಕೆ ಡಾಕ್ಟರೇಟ್ ಪಡೆದವರು – ಫರ್ಡಿನೆಂಡ್ ಕಿಟ್ಟೆಲ್

ಚಲನಚಿತ್ರ ಹಿನ್ನೆಲೆ ಗಾಯನಕ್ಕೆ ರಾಷ್ಟ್ರ ಪ್ರಶಸ್ತಿ ಪಡೆದ ಮೊದಲ ಕನ್ನಡಿಗ – ಶಿವಮೊಗ್ಗ ಸುಬ್ಬಣ್ಣ

ಪುಸ್ತಕ ಪ್ರಕಾಶನಕ್ಕೆ ಪದ್ಮಶ್ರೀ ಪಡೆದ ಮೊದಲ ಕನ್ನಡಿಗ – ಜಿ.ಬಿ.ಜೋಷಿ

ಸೋವಿಯತ್ ಲ್ಯಾಂಡ್ ಪ್ರಶಸ್ತಿ ಪಡೆದ ಮೊದಲ ಕನ್ನಡಿಗ – ಬಸವರಾಜ್ ಕಟ್ಟಿಮನಿ

ಕನ್ನಡದ ಮೊದಲ ಪತ್ರಕರ್ತೆ / ಪ್ರಕಾಶಕಿ – ನಂಜನಗೂಡು ತಿರುಮಲಾಂಬಾ

ಕನ್ನಡ ನಾಟಕ ರಂಗದ ಮೊದಲ ಸ್ತ್ರೀ – ಗಂಗೂಬಾಯಿ ಗುಳೇದಗುಡ್ಡ

ಸಾಹಿತ್ಯ ಸಮ್ಮೇಳನದ ಮೊದಲ ಮಹಿಳಾ ಅಧ್ಯಕ್ಷರು – ಜಯದೇವಿ ತಾಯಿ ಲಿಗಾಡೆ

ಸೋವಿಯತ್ ಲ್ಯಾಂಡ್ ಪ್ರಶಸ್ತಿ ಪಡೆದ ಮೊದಲ ಕನ್ನಡತಿ – ಅನುಪಮಾ ನಿರಂಜನ

ಕನ್ನಡ ಚಿತ್ರರಂಗದ ಮೊದಲ ಮಹಿಳಾ ಛಾಯಾಗ್ರಾಹಕಿ – ಬಿ.ಆರ್. ವಿಜಯಲಕ್ಷ್ಮಿ

ಲೋಕಸಭೆ ಅಧ್ಯಕ್ಷರಾದ ಮೊದಲ ಕನ್ನಡಿಗ – ಶ್ರೀ ಕೆ.ಎಸ್. ಹೆಗಡೆ

ಕನ್ನಡದ ಮೊದಲ ಸಂಗೀತ ನಿರ್ದೇಶಕಿ – ಅನಸೂಯ ದೇವಿ

ಕನ್ನಡದ ಮೊದಲ ವಚನಕಾರ – ಜೇಡರ ದಾಸಿಮಯ್ಯ

**ಆಕರ ಗ್ರಂಥಗಳು:**

1) "ಕರ್ನಾಟಕದ ಪ್ರೌಢ ಇತಿಹಾಸ ಮತ್ತು ಸಂಸ್ಕೃತಿ" - ಕೆ. ಎನ್. ಎ.

2) "ಕನ್ನಡ ಕನ್ನಡಿಗ ಕರ್ನಾಟಕ" - ಪ್ರೊ ಎಲ್.ಎಸ್. ಶೇಷಗಿರಿರಾವ್,
ಡಾ. ಎಮ್ ಚಿದಾನಂದಮೂರ್ತಿ,
ರಾ.ನಂ. ಚಂದ್ರಶೇಖರ

3) "ಕರ್ನಾಟಕ ಸಂಕ್ಷಿಪ್ತ ಇತಿಹಾಸ" - ಡಾ.ಸೂರ್ಯನಾಥ
ಯು.ಕಾಮತ್

4) "ಕನ್ನಡ ಸಾಹಿತ್ಯ" (ವೈವಿಧ್ಯತೆ ಮತ್ತು ಅನನ್ಯತೆ) - ಡಾ. ಎಚ್ ಎಂ ಚೆನ್ನಪ್ಪಗೋಳ

5) "ಕರ್ನಾಟಕ ದರ್ಶನ" - ಎಸ್. ವೈ. ಸೋಮಶೇಖರ್